ಕೊಗತೆ ಬೀಳುತ್ತಲೇ ಇದೆ. ಈ ಪ್ರಾಜೆಕ್ಟ್‌ಗಳನ್ನು ಕೇವಲ ೬ ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಪೂರೈಸುವುದಕ್ಕಾಗುವುದಿಲ್ಲ. ಆದರೂ ಕೂಡ ಬೆರತಕ್ಕ ಬೇಡಿಕೆಯನ್ನು ಪೂರೈಸಲು ನಾವು ಎಷ್ಟೇ ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡರೂ ಅದು ಸಾಲದೇ ಬರುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ.—ಬೆಂಗಳೂರಿನ ಸುತ್ತ ಮುತ್ತ ಸುಮಾರು ೫೦ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯಲ್ಲಿ ಖಾಸಗೀಯವರೂ ಮತ್ತು ಸರ್ಕಾರದವರೂ ಸೇರಿ ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ ಹೊರಟಿದ್ದೀರೆಂದು ಕೇಳಿದ್ದೇವೆ. ಇದು ನಿಜವೇ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಎಂ. ಯಾಹ್ಯ—ಖಾಸಗಿ ವಿಚಾರದಲ್ಲಿ ಹೇಳುವುದಾದರೆ ಯಲಹಂಕದಲ್ಲಿ ಯಾವ ಘಟಕ ಬರುತ್ತಿದೆ ಅದರ ೧೬೫ ಕೋಟಿರೂಪಾಯಿಗಳ ಪೆಚ್ಚಟ್ಟಿಂದ ೨೨೦ ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಉತ್ಪಾದನಾ ಶಕ್ತಿಯನ್ನು ಳ್ಳದ್ದಾಗಿದೆ. ಅದಕ್ಕಾಗಿ ಖಾಸಗೀ ಇಂಡಸ್ಟ್ರೀಸ್‌ನವರಿಂದಲೂ ಸಹಾಯ ತೆಗೆದುಕೊಂಡಿದ್ದೇವೆ. ಫ್ರಾನ್ಸ್‌ನಿಂದ ೯೦ ಕೋಟಿ ರೂಪಾಯಿಂಗಳ ಏಡ್ಸ್ ಬರುತ್ತಿದೆ. ೩೦ ಕೋಟಿ ರೂಪಾಯಿಗಳು ಬಾಕಿ ನಮ್ಮ ಅಸ್ಸೂಯಲ್ ಪ್ಲಾನ್‌ನಿಂದ ಹಾಕಲಾಗುತ್ತಿದೆ. ಎರಡನೆಯದಾಗಿ ಕೆಲವು ಖಿ-೬ ಚಿಕ್ಕ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಸ ಏನು ಇದೆ ಅವುಗಳನ್ನು ಕಳೆದ ಸರ್ಕಾರ ದವರೇ ತೆಗೆದು ಕೊಂಡಿದ್ದರು. ಅವುಗಳಲ್ಲಿ ಒಂದರ ಕೆಲಸ ಪ್ರಾರಂಭ ನಡೆಯುತ್ತಿದೆ. ಬಾಕಿ ಯಾವುದೂ ನಡೆಯುತ್ತಿಲ್ಲ ವೆಂದು ತಿಳಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಸಲಕರಣೆಗಳ ಕೊರತೆಯ ಬಗ್ಗೆ.

೨೦. ಶ್ರೀ ಬಿ. ರಮಾನಾಥ ರೈ, (ಬಂಟವಾಳ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಬೇಡಿಕೆದಾರರ ಸಂಖ್ಯೆ ಜಾಸ್ತಿಯಾಗಿ ವಿದ್ಯುತ್ ಸಲಕರಣೆಗಳ ಕೊರತೆಯಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ .

(ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳಲಿರುವ ಕ್ರಮವೇನು.

ಇ) ಬೇಡಿಕೆದಾರರ ಹಾಗೂ ಬಳಕೆದಾರರ ಅನುಕೂಲಕ್ಕಾಗಿ ಸೂಪರಿಂಟೆಂಡಿಂಗ್ ಇಂಜಿನೀಯರ ರವರ ಪೂರ್ಣ ಪ್ರಮಾಣದ ವೃತ್ತ ಕಛೇರಿಯನ್ನು ತೆರೆಯುವ ಯೋಜನೆ ಇದೆಯೆ ?

ಶ್ರೀ ಎಸ್. ಎಂ. ಯಾಹ್ಯ.—(ಕೈಗಾರಿಕೆ, ಇಂಧನ ಹಾಗೂ ಪಕ್ಷ ಸಚಿವರು).—

ಅ) ಬಂದಿರುವುದಿಲ್ಲ.

ಆ) ' ಅ 'ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಂಗಳೂರಿನಲ್ಲಿ ವೃತ್ತ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆಯು ಕೆ.ಇ.ಬಿ.ಯ ಪರಿಶೀಲನೆಯಲ್ಲಿದೆ.

ಶ್ರೀ ಬಿ. ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಥಮ ಪ್ರಶ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಬೇಡಿಕೆದಾರರ ಸಂಖ್ಯೆ ಜಾಸ್ತಿಯಾಗಿ ವಿದ್ಯುತ್ ಸಲಕರಣೆಗಳ ಕೊರತೆಯಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಮಾನ್ಯ ಸಚಿವರು ಇಲಾಖೆಯ ಅಧಿಕಾರಿಗಳ ಮೂಲಕ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಐದು ವರ್ಷಗಳಿಂದ ಪಂಪ್ ಸೆಟ್ಟುಗಳನ್ನು ಖರೀದಿಸಿ ಅವುಗಳನ್ನು ಅಳವಡಿಸಿದ್ದರೂ ಅದಕ್ಕೆ ಬೇಕಾದ ವಿದ್ಯುತ್ತನ್ನು ಒದಗಿಸಲು ಇಲಾಖೆಯ ಮೂಲಕ ಸಾಧ್ಯವಾಗಿಲ್ಲ. ನಿಮ್ಮ ಪಂಪ್‌ಸೆಟ್ ಸ್ಕೀಮ್ ಎನ್‌ಆರ್‌ಡಬ್ಲ್ಯೂಎಸ್, ಆರ್‌ಡಬ್ಲ್ಯೂಎಸ್ ನಿಂದ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಾಗದ ಕಾರಣ ತಾಲ್ಲೂಕು ಪಂಚಾಯತ್ ಅಧಿಕಾರಿಗಳನ್ನು ಭೇಟಿ ಮಾಡಿ ಆದಷ್ಟು ಬೇಗ ವಿದ್ಯುತ್ ಸರಬರಾಜು ಮಾಡಬೇಕೆಂದು ಹೇಳಿದಾಗ, ನಮಗೆ ಸಲಕರಣೆಗಳ ಕೊರತೆ ಇದೆ. ವೈರ್ ಇಲ್ಲ, ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ಸ್ ಇಲ್ಲವೆಂದು ಉತ್ತರವನು ಕೊಟ್ಟಿರುತ್ತಾರೆ. ಈಗ ನಾವು ಪ್ರಶ್ನೆಯನ್ನು ಕೇಳಿದರೆ ಸಲಕರಣೆಯ ಕೊರತೆ ಇದೆ ಎಂದು ಹೇಳಿ ಬಿಟ್ಟರೆ ಆ ಒಂದು ಇಲಾಖೆಯ ಮುಖ್ಯಸ್ಥರು ನಿದ್ದೆ ಮಾಡುತ್ತಿರುತ್ತಾರೆಯೇ ? ಅಥವಾ ಅವರ ಕೈ ಕೆಳಗಿನ ನೌಕರರು ಕೆಲಸ ಮಾಡುತ್ತಿಲ್ಲವೇ ಇದನ್ನು ಯಾವ ರೀತಿ ಸರಿ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಮೆಟೀರಿಯಲ್ಸ್‌ನ್ನು ಸಪ್ಲೆ ಮಾಡುತ್ತಿರುತ್ತಾರೋ ಇಲ್ಲವೊ ಎಂದು ಕೇಳಿದ್ದಾರೆ. ನಾವು ಪಂಪ್ ಸೆಟ್ ಗಳಿಗಾಗಿ ಸೌತ್ ಕೆನರಾಕ್ಕೆ ಒಂದು ಟಾರ್‌ಗೆಟ್ ಇಟ್ಟು ಕೊಂಡಿದ್ದೇವೆ. ೧೯೮೯–೯೦ಕ್ಕೆ ೨೮೫೦ ಟಾರ್ ಗೆಟ್ ಇಟ್ಟುಕೊಂಡಿದ್ದೆವು. ಅದು ಟಾರ್‌ಗೆಟ್ ವಿರುದ್ಧ ೩೦೫೬ ಪಂಪ್‌ಸೆಂಟ್‌ಗಳಾಯಿತು. ಇಷ್ಟಕ್ಕೂ ಮೆಟೀರಿಯಲ್ಸ್‌ನ್ನು ಕೊಟ್ಟಿದ್ದೇವೆ. ೧೯೯೦ಕ್ಕೆ ಟಾರ್‌ಗೆಟ್ ಹೆಚ್ಚು ಮಾಡಿ ೩೬೦೦ಕ್ಕೆ ಮೆಟೀರಿಯಲ್ಸ್ ಕೊಟ್ಟಿದ್ದೇವೆ, ಕಳೆದ ವರ್ಷವು ಟಾರ್‌ಗೆಟ್ ಹೆಚ್ಚಾಗಿದೆ. ಟಾರ್‌ಗೆಟ್ ಪ್ರಕಾರ ಮೆಟೀರಿಯಲ್ಸ್ ಕೊಟ್ಟು ಫುಲ್‌ಫಿಲ್ ಮಾಡದಿದ್ದಲ್ಲಿ ಎಷ್ಟು ಮೆಟೀರಿಯಲ್ಸ್ ಕೊಡಬೇಕಾಗಿರುತ್ತದೋ ಅಷ್ಟನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ.—ಮೆಟೀರಿಯಲ್ಸ್ ಕೊಟ್ಟಿಲ್ಲವೆನ್ನುವ ಪ್ರಶ್ನೆಯಲ್ಲ. ನಮಗೆ ಬೇಕಾಗಿರತಕ್ಕಂಥ ಬೇಡಿಕೆಯಲ್ಲಿ ಸ್ವಲ್ಪಮಟ್ಟಿಗೆ ಕೊಟ್ಟರೆ ಅದರಿಂದ ಪೂರ್ಣ ಬೇಡಿಕೆಯನ್ನು ಫುಲ್‌ಫಿಲ್ ಮಾಡಿದಂತಾಗುವುದಿಲ್ಲ. ಅಭಿವೃದ್ಧಿಯಾಗಬೇಕಾಗಿರತಕ್ಕಂಥ ನಮ್ಮ ಜಿಲ್ಲೆಯಲ್ಲಿ ವಿಶೇಷವಾದಂತ ಬೇಡಿಕೆ ಇರುತ್ತದೆ. ಸಲಕರಣೆಗಳ ಕೊರತೆ ವಿಪರೀತವಾಗಿರುತ್ತದೆ. ಆದ್ದರಿಂದ ಪೂರ್ಣ ಪ್ರಮಾಣದಲ್ಲಿ ನಮ್ಮ ಬೇಡಿಕೆಯನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೆವು, ಈ ಕಚೇರಿ ಶಿವಮೊಗ್ಗಕ್ಕೆ ಹೋಗಬೇಕಾದಂಥ ಪ್ರಸಂಗವಿದೆ, ಇದರಿಂದಾಗಿ ಬಹಳ ತೊಂದರೆಯಾಗುತ್ತಿದೆ. ಅನೇಕ ವರ್ಷಗಳಿಂದ ಸೂಪರಿಂಟೆಂಡೆಂಟ್ ಇಂಜಿನೀಯರ್‌ರವರ ಕಚೇರಿಯನ್ನು ಮಂಗಳೂರಿನಲ್ಲಿ ಮಾಡಿದರೆ ನೇರವಾಗಿ ನಾವು ಸಲಕರಣೆಗಳನ್ನು ಕೇಳಲಿಕ್ಕೆ ಅನುಕೂಲವಾಗುತ್ತದೆ. ಇವೊತ್ತು ಟ್ರಾನ್ಸ್‌ಫಾರ್ಮರ್ಸ್ ಬೇಕಾಗಿದೆ ಎಂದರೆ ಶಿವಮೊಗ್ಗಕ್ಕೆ ಹೋಗಬೇಕಾಗಿದೆ. ದಯವಿಟ್ಟು ಇಲ್ಲಿಯ ಜನರ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದರೆ ಮಂಗಳೂರಿನಲ್ಲಿ ಒಂದು ಸೂಪರಿಂಟೆಂಡೆಂಟ್ ಕಚೇರಿಯನ್ನು ತೆರೆಯಬೇಕೆಂದು ಮಾನ್ಯ ಸಚಿವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸೌತ್ ಕೆನರಾದಲ್ಲಿ ಹೆಚ್ಚು ಹೆಚ್ಚು ಮೆಟೀರಿಯಲ್ ಕೊಡಬೇಕೆಂದು ಇದ್ದರೂ ನಾವು ಟಾರ್ಗೆಟ್ ಇಡಲೇಬೇಕಾಗುತ್ತದೆ. ಟಾರ್ಗೆಟ್ ಇಡದೆ ಯಾವ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಟಾರ್ಗೆಟ್‌ಗಿಂತ ಜಾಜ್ತಿಗೆಯೇ ಸೌತ್ ಕೆನರಾಕ್ಕೆ ಕೊಟ್ಟಿದ್ದೇವೆ. ಇನ್ನೂ ಹೆಚ್ಚು ಬೇಡಿಕೆ ಇದೆ. ಆದರೆ ಪ್ರಕಾರ ಸರ್ಕಾರದಲ್ಲಿ ಎಷ್ಟು ರಿಸೋರ್ಸ್ ಇದೆಯೋ ಅಷ್ಟನ್ನು ಕೊಡುತ್ತೇವೆ. ಸೌತ್ ಕೆನರಾ ಜಾಜ್ತಿ ಪ್ರೋಗ್ರೆಸ್ಸೀವ್ ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್‌ನಲ್ಲಿ ಬಹಳ ಮುಂದಿದೆ ಎಂದು ಬಾಕಿ ಜಿಲ್ಲೆಗಳಿಗೆ ಕೊಟ್ಟದ್ದಕ್ಕಿಂತ ಸೌತ್ ಕೆನರಾಕ್ಕೆ ಹೆಚ್ಚಿಗೆ ಕೊಟ್ಟಿದ್ದೇವೆ. ಅಲ್ಲಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸನ್ನು ಕೊಡಬೇಕೇ ಬೇಡವೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಎಲ್ಲೆಲ್ಲಿ ಹೊಸ ಆಫೀಸ್ ಗಳನ್ನು ತೆರೆಯಬೇಕೆಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈಗ ಮಂಗಳೂರಿನಲ್ಲಿ ಚೀಫ್ ಇಂಜಿನಿಯರ್ ಆಫೀಸ್. ಇದೆ. ಚೀಫ್ ಇಂಜಿನಿಯರ್ ಇದ್ದಾರೆ.

ಶ್ರೀ ಬಿ. ರಮಾನಾಥ ರೈ– ನಮಗೆ ಚೀಫ್ ಇಂಜಿನಿಯರ್ ಬೇಕಾಗಿಲ್ಲ. ನಮಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕಛೇರಿ ಬೇಕಾಗಿದೆ. ನಮ್ಮ ಜಿಲ್ಲೆಗೆ ವಿಶೇಷವಾಗಿ ವಿದ್ಯುತ್ತಿನ ಬೇಡಿಕೆ ಇದೆ. ಅದನ್ನು ಖಂಡಿತವಾಗಿ ಪೂರೈಸಬೇಕು.

ಶ್ರೀ ಎಸ್.ಎಂ. ಯಾಹ್ಯ.—ಕೆ.ಇ.ಬಿ.ಯು ಹೊಸ ಕಛೇರಿಗಳನ್ನು ತೆರೆಯುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸಿಗಿಂತ ಹೆಚ್ಚಾಗಿ ಕರ್ನಾಟಕದ ೨೦ ತಾಲ್ಲೂಕುಗಳಲ್ಲಿ ಸಬ್‌ಡಿವಿಜನ್ ಆಫೀಸ್ ಇಲ್ಲ ಅದನ್ನೆಲ್ಲಾ ಸರಿಯಾಗಿ ಮಾಡಬೇಕು. ಅಲ್ಲೆಲ್ಲಾ ಹೊಸ ಹೊಸ ಕಛೇರಿಗಳನ್ನು ತೆರೆಯಬೇಕು. ೨೦ ತಾಲ್ಲೂಕುಗಳಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಕಛೇರಿಗಳೇ ಇಲ್ಲ.

ಅಧ್ಯಕ್ಷರು —ಅವುಗಳನ್ನೆಲ್ಲಾ ರ್ಯಾಷನಲೈಸ್ ಮಾಡಿ. ಶ್ರೀ ವಾಟಾಳ್ ನಾಗರಾಜ್ ಅವರ ಪ್ರಶ್ನೆಗೆ ಸರ್ಕಾರದವರು ಟೈಂ ಕೇಳಿರುವುದರಿಂದ ಅದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಭಾಗ್ಯಜ್ಯೋತಿ ಸಂಪರ್ಕವನ್ನು ತೆಗೆದಿರುವುದು.

೧೧೧. ಶ್ರೀ ಎ. ಟಿ. ರಾಮಸ್ವಾಮಿ,(ಅರಕಲಗೂಡು).—ಮಾನ್ಯ ಶೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಜನತಾ ಮನೆಗಳಿಗೆ ಭಾಗ್ಯಜ್ಯೋತಿ ಅಸ್ಥೆಯ ವಿದ್ಯುಚ್ಛಕ್ತಿ ಒದಗಿಸುತ್ತಿದ್ದುದು ನಿಜವೇ